

# ಬುದ್ಧನ ಬೆರಳು





ಪ್ರಾರ್ಥನೆಯಲ್ಲಿರುವ ಭಗವಾನ್ ಬುದ್ಧನ ಮುಚ್ಚಿದ ಕೈಬೆರಳುಗಳನ್ನು ಹೋಲುವ ಈ ಹಣ್ಣನ್ನು ನೋಡಿದ್ದೀರಾ?

ಈಶಾನ್ಯ ಭಾರತ ಮತ್ತು ಚೀನಾದಲ್ಲಿ ಈ ಹಣ್ಣು ಹೆಚ್ಚಾಗಿ ಕಂಡುಬರುತ್ತದೆ. ಪೂರ್ಣ ಪಕ್ವವಾದಾಗ ಬುದ್ಧನ ತೆರೆದ ಕೈಬೆರಳನ್ನು, ಕಾಯಿಯಾಗಿರುವಾಗ ಪ್ರಾರ್ಥನೆಯಲ್ಲಿರುವ ಬುದ್ಧನ ಮುಚ್ಚಿದ ಕೈಬೆರಳುಗಳನ್ನು ಹೋಲುವುದರಿಂದ ಇದನ್ನು 'ಬುದ್ಧನ ಬೆರಳಿನ ಹಣ್ಣು' ಎಂದು ಕರೆಯುತ್ತಾರೆ.

ಸಸ್ಯಲೋಕದ ರುಟೇಸಿ ಕುಟುಂಬಕ್ಕೆ ಸೇರಿದ ಈ ಸಸ್ಯದ ವೈಜ್ಞಾನಿಕ ಹೆಸರು ಸಿಟ್ರಸ್ ಮೆಡಿಕಾ. ಸುವಾಸನಾಯುಕ್ತವಾದ ಈ ಹಣ್ಣು ಬೆರಳಿನಾಕಾರದಲ್ಲಿದೆ. ಗಿಡ ನಿಂಬೆಯಂತೆ ಚಿಕ್ಕದಾಗಿದ್ದು, ಚಿಕ್ಕ ಮುಳ್ಳುಗಳಿವೆ. ಎಲೆಗಳು 6 ಇಂಚಿನವರೆಗೆ ಬೆಳೆಯುತ್ತವೆ. ಹೊರಗಿನಿಂದ ನೋಡಿದರೆ ಹೂಗಳು ನಸು ನೇರಳೆ ಬಣ್ಣದಂತೆ ಕಾಣುತ್ತವೆ. ಅವೂ ಸುವಾಸನೆ ಹೊಂದಿವೆ. ತಿರುಳು ಕೊಂಚ ಹುಳಿಯಾಗಿದೆ. ರಸವಿರುವುದಿಲ್ಲ.

ಇದು ಸುವಾಸನೆ ಬೀರುವುದರಿಂದ ಚೀನಾ, ಜಪಾನ್‌ಗಳಲ್ಲಿ ಕೋಣೆಯನ್ನು ಸುವಾಸನಾಯುಕ್ತವನ್ನಾಗಿಸಲು, ಬಟ್ಟೆಗಳ ಮಧುರ ಪರಿಮಳಕ್ಕಾಗಿ ಬಳಸುವರು. ಸಲಾಡ್‌ಗಳಲ್ಲೂ ಬಳಸುವುದುಂಟು. ಬುದ್ಧ ಭಗವಾನರ ಮಂದಿರಗಳಲ್ಲಿ ಭಕ್ತರು ದೇವರಿಗೆ ಈ ಹಣ್ಣು ಅರ್ಪಿಸುವುದುಂಟು.

ನಿಮ್ಮ ಕೈತೋಟದಲ್ಲೂ ಅಂದಕ್ಕಾಗಿ ಬೆಳೆಸಬಹುದು. ಸಸ್ಯಾಭಿವೃದ್ಧಿಯನ್ನು ಕಾಂಡದ ತುಂಡುಗಳಿಂದ ಮಾಡಬಹುದು.

■ ಪ್ರಕಾಶ ಎಸ್. ಮನ್ನಂಗಿ

